"ಕಾಫಿ ತರಿಸಲಾ, ರಿಂಕೊ" ಎಂದು ಅತ್ತೆ ಕೇಳಿದಾಗ ಸೊಸೆ ಹೇಳಿದಳು, "ಬೇಡ, ನೀವು ನಮ್ಮ ಮನೆಗೆ ಬರಲೇಬೇಕು. ಅಲ್ಲಿಯೇ ಕಾಫಿ ಕುಡಿಯೋಣ. ಇವನೇನು ಎದ್ದುಬಿಡ್ತಾನೆ." ಅವನು ಎದ್ದಿದ್ದೂ ಆಯಿತು. ಟ್ಯಾಕ್ಸಿ ತರಸುವ ಸಲಹೆ ನೀಡಿದರು ಅತ್ತೆ. ಸೊಸೆ ಹೇಳಿದಳು "ಟ್ರೈನ್ ಬಹಳ ಬೇಗ ಹೋಗಬಹುದು, ಟ್ಯಾಕ್ಸಿ ನಿಧಾನ" ಎಂದಳು. ಅಮ್ಮ ತನ್ನ ಬ್ಯಾಗನ್ನು ಕೈಗೆ ತೆಗೆದುಕೊಂಡಾಗ ಹೊರಗೆ ಹೋಗುವುದು ಖಚಿತವಾಯಿತು ಹಯೂಟೊವಿಗೆ. ಕೂಡಲೇ ಅಜ್ಜಿಯ ಬಳಿ ಬಂದು ಅವರ ಕೈಯನ್ನು ಹಿಡಿದು ತನ್ನ ಜೊತೆ ಬರುವಂತೆ ಎಳೆದ. ಯಾವ ಅಜ್ಜಿ ಇಂತಹ ಆಹ್ವಾನವನ್ನು ತಿರಸ್ಕರಿಸಬಲ್ಲಳು? "ಬರುತ್ತೇನೆ" ಎಂದವರೇ ಅವನನ್ನು ಮತ್ತಷ್ಟು ಮುದ್ದಿಸಿದರು.

ಹದಿನೈದು ನಿಮಿಷಗಳ ಟ್ರೈನ್ ಪ್ರಯಾಣ. ದಾರಿಯುದ್ದಕ್ಕೂ ಹಯೂಟೊ ಅಜ್ಜಿ ಮತ್ತು ಇತರೆ ಪ್ರಯಾಣಿಕರನ್ನು ತನ್ನ ಮುದ್ದಾದ ಹಾಡುಗಳಿಂದ ರಂಜಿಸಿದ. ಅಜ್ಜಿಯ ಕೈಹಿಡಿದು ಏನೇನೋ ಹೇಳಿದ. ಅವರು ಇಳಿಯುವ ಸ್ಟೇಷನ್ ಅಸಾಕುಸಾ ಬಂತು, ಅದರ ಹತ್ತಿರವೇ ಮನೆ. ಎರಡನೇ ಮಹಡಿಯಲ್ಲಿದ್ದ ಅಪಾರ್ಟ್‌ಮೆಂಟ್. ಲಿಫ್ಟ್ ಇಲ್ಲ. ಕಷ್ಟ ಪಟ್ಟೆ ಹತ್ತಿದರು ರಾಗಿಣಿ. ತೀರಾ ಚಿಕ್ಕ ಕಟ್ಟಡ. ಕಾಲಿಡಲು ಜಾಗವಿಲ್ಲ. ನ್ಯೂಯಾರ್ಕಿನ ತಮ್ಮ ಮನೆಯ ಗರಾಜ್ ಇವರ ಮನೆಗಿಂತ ದೊಡ್ಡದಾಗಿತ್ತು.'ಏನು ಗ್ರಹಚಾರ ಸುನಿಲನದು' ಎಂದುಕೊಂಡರು.

ಮನೆಯನ್ನು ಪ್ರವೇಶಿಸಿದ ಕೂಡಲೇ ಹಯೂಟೊ ಅಲ್ಲಿದ್ದ ಒಂದು ಪೆಟ್ಟಿಗೆಯಿಂದ ತನ್ನ ಕಾರೊಂದನ್ನು ತಂದು ಅಜ್ಜಿಯ ಮುಂದೆ ಪ್ರದರ್ಶಿಸಿದ. ನಂತರ ಫೈರ್ ಎಂಜಿನ್. ನಂತರ ಜೀಪು. ಐಪ್ಯಾಡಿನಲ್ಲಿ 'ಟ್ವಿಂಕಲ್ ಟ್ವಿಂಕಲ್ ಲಿಟ್ಲ್ ಸ್ಟಾರ್' ಹಾಕಿ ತೋರಿಸಿದ. ಅಷ್ಟರಲ್ಲಿ ತಾಯಿ ಅವನಿಗೆ ಗೆಣಸನ್ನು ಬೇಯಿಸಿ ತಂದು ಕೊಟ್ಟಳು. ಮೊಮ್ಮಗ 'ಒಬಾಸಾನ್, ಒಬಾಸಾನ್' ಎಂದು ಅಜ್ಜಿಯ ಕಡೆ ನೋಡಿದ. ಅಜ್ಜಿಗೆ ಅರ್ಥವಾಯಿತು. ತಾವೇ ಆ ಬಟ್ಟಲನ್ನು ತೆಗೆದುಕೊಂಡು ಅವನಿಗೆ ತಿನ್ನಿಸಿದರು. ನಂತರ ಹಾಲು ಕುಡಿಸಿದರು. ಮಗು ತಾಯಿ, ಅಜ್ಜಿ ಇಬ್ಬರಿಗೂ ಬೈ ಹೇಳಿ ತನ್ನ ಹಾಸಿಗೆಯ ಮೇಲೆ ಮಲಗಿತು.

ಈಗ ಅತ್ತೆ ಸೊಸೆಯರ ಮಾತುಕತೆಗೆ ಅವಕಾಶ ಸಿಕ್ಕಿತು. ರಾಗಿಣಿ ಹೆಚ್ಚಾಗಿ ಏನನ್ನೂ ಕೆದಕಲಿಲ್ಲ. "ತನಗೆ ಬೇಕಾದವಳನ್ನು ಕಟ್ಟಿಕೊಂಡು ಸಂಸಾರ ಮಾಡುತ್ತಾ ಇದ್ದಾನೆ, ಮಗು ಕೂಡ ಆಗಿದೆ. ನಾನು ಹೇಳೋದೇನಿದೆ?" ಎಂಬ ನಿಲುವು ತಾಳಿದರು. ಹಿಂದೆ ಮಾಯವಾಗಿದ್ದ ವಿವೇಕ ಈಗ ಮೂಡಿತು. ಮೊಮ್ಮಗನನ್ನು ನೋಡಿ ಅವರು ಹಿಂದಿನದನೆಲ್ಲಾ ಮರೆತರು. ಸೊಸೆಯ ಮನೆಯ ಕಡೆ ಏನು, ಹೇಗೆ, ಹೆರಿಗೆಯಾದಾಗ ಯಾರು ಸಹಾಯ ಮಾಡಿದರು ಇವನ್ನೆಲ್ಲಾ ವಿಚಾರಿಸಿಕೊಂಡರು. "ನನ್ನ ಬಾಣಂತನಕ್ಕೆ ಯಾರೂ ಬರಲಿಲ್ಲ. ನಮ್ಮ ಅಜ್ಜಿಗೆ ಕೈಯ್ಯಲ್ಲಾಗದು, 80 ವರ್ಷ ಅವಳಿಗೆ. ಮಿಕ್ಕ ನೆಂಟರು ಮದುವೆಯ ನಂತರ ನನ್ನಿಂದ ದೂರವಾಗಿದ್ದಾರೆ. ಹೆರಿಗೆಯ ಕಾಲದಲ್ಲಿ ಸುನಿಲ್ ನನಗೆ ಸಹಾಯ ಮಾಡಿದ. ಅದಲ್ಲದೇ ಇಲ್ಲಿಯೇ ಮನೆಯ ಹತ್ತಿರ ಡಾಕ್ಟರ್ ಒಬ್ಬರಿದ್ದಾರೆ. ಅವರನ್ನು ನೋಡುತ್ತಿದ್ದೆ. ಸಣ್ಣ ಪುಟ್ಟ ಸಮಸ್ಯೆ ಎಂದರೆ ಗೂಗಲ್ ಇದೆಯಲ್ಲ" ಎಂದಾಗ ರಾಗಿಣಿಗೆ 'ಅಯ್ಯೋ ಪಾಪ, ಎಷ್ಟು ಕಷ್ಟ ಪಟ್ಟಿದ್ದಾಳೆ, ನಮ್ಮ ಕುಟುಂಬ ದೊಡ್ಡಸ್ತಿಕೆ ಬಿಟ್ಟು ಎಲ್ಲರಂತೆ ಇದ್ದಿದ್ದರೆ ಎಷ್ಟು ಚೆನ್ನಾಗಿರೋದು!' ಎನಿಸಿತು.

ಸೊಸೆ ಮತ್ತೊಂದು ಮಾತು ಹೇಳಿದಳು:

"ಹಯೂಟೊಗೆ ನಮ್ಮ ಕಡೆಯಿಂದ ಅಜ್ಜಿ, ತಾತ ಯಾರೂ ಇಲ್ಲ. ಪಾಪ, ಅವನಿಗೆ ಆ